# ಬನ್ನಿ ತಿಳಿಯೋಣ..... ಅರಿಯೋಣ.....

# ಮಕ್ಕಳ ಹಕ್ಕುಗಳು, ಕಾನೂನುಗಳು, ಮಕ್ಕಳ ರಕ್ಷಣಾ ವ್ಯವಸ್ಥೆಗಳು ಮತ್ತು ಪ್ರಾಧಿಕಾರ

## ಮಕ್ಕಳ ಹಕ್ಕುಗಳು

ಮಗುವಿಗೆ ಆರೋಗ್ಯದಾಯಕ ವಾತಾವರಣ ಕಲ್ಪಿಸುವುದು ಮತ್ತು ಮಕ್ಕಳಿಗೆ ಸುಂದರ ಬಾಲ್ಯವನ್ನು ಕಲ್ಪಿಸಿಕೊಟ್ಟು ಉತ್ತಮ ಪ್ರಜೆಯನ್ನಾಗಿ ರೂಪಿಸುವ ಜವಾಬ್ದಾರಿ ನಾಗರಿಕ ಸಮಾಜದ ಹೊಣೆ. ವಿಶ್ವ ಮಟ್ಟದಲ್ಲಿ ಈ ಕುರಿತು ಚಿಂತನೆಯನ್ನು ಮಾಡಿ ಮಾನವ ಹಕ್ಕುಗಳ ರಕ್ಷಣೆಯನ್ನು ಮಾಡಲು ಮಾನವ ಹಕ್ಕುಗಳ ಘೋಷಣೆಯನ್ನು ಮಾಡಿತು. ಇದರ ನಂತರ ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ವಿಶ್ವ ಸಂಸ್ಥೆಯು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ಘೋಷಣೆಯನ್ನು ಮಾಡಿ ಎಲ್ಲಾ ದೇಶಗಳು ಇದಕ್ಕೆ ಬದ್ಧರಾಗುವಂತೆ ಮಾಡಿ ಮಕ್ಕಳ ಹಕ್ಕುಗಳಿಗೆ ಹೆಚ್ಚಿನ ಒತ್ತನ್ನು ನೀಡಲಾಯಿತು.

**ಮಕ್ಕಳು ಎಂದರೆ ಯಾರು?**

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆಯಂತೆ 18 ವರ್ಷದೊಳಗಿನ ಎಲ್ಲಾ ಮನುಷ್ಯರನ್ನು ಮಕ್ಕಳು ಎಂದು ಪರಿಗಣಿಸಲಾಗಿದೆ.



**ಮಕ್ಕಳ ಹಕ್ಕುಗಳು:**

ವಿಶ್ವ ಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ ಘೋಷಣೆಯಾದ ನಂತರ ಮಕ್ಕಳ ಹಕ್ಕುಗಳನ್ನು ಪ್ರಮುಖವಾಗಿ ನಾಲ್ಕು ಹಕ್ಕುಗಳನ್ನಾಗಿ ವಿಂಗಡಿಸಲಾಗಿದೆ.

**ಬದುಕುವ ಹಕ್ಕು:**

ಎಲ್ಲಾ ಮಕ್ಕಳಿಗೂ ಬದುಕುವ ಹಕ್ಕಿದೆ. ಪ್ರತಿಯೊಂದು ಮಗುವಿಗೂ ಜನ್ಮ ಹೊಂದುವ, ಜೀವಿಸುವ, ಉತ್ತಮ ಆರೋಗ್ಯ ಸೇವೆ, ಪೌಷ್ಟಿಕ ಆಹಾರ ಪಡೆಯುವ, ಹೆಸರನ್ನು ಹೊಂದುವ ಮತ್ತು ತಾನು ಒಂದು ದೇಶದ ಪ್ರಜೆ ಎಂದು ಗುರುತಿಸಿಕೊಳ್ಳುವ ಹಕ್ಕು.






**ರಕ್ಷಣೆಯ ಹಕ್ಕು:**

ಪ್ರತಿಯೊಂದು ಮಗುವು ಯಾವುದೇ ಶೋಷಣೆ ಇಲ್ಲದ ಪರಿಸರದಲ್ಲಿ ಬೆಳೆಯುವುದರ ಜೊತೆಗೆ ರಕ್ಷಣೆ ಪಡೆಯುವುದು ಮಕ್ಕಳು ದೌರ್ಜನ್ಯ, ಹಿಂಸೆ, ಒತ್ತಡಗಳಿಲ್ಲದೆ ಸಂತಸದಾಯಕ ಪರಿಸರದಲ್ಲಿ ಬೆಳೆಯಬೇಕು.

**ವಿಕಾಸ ಹೊಂದುವ ಹಕ್ಕು:**

ಮಾನಸಿಕ ಮತ್ತು ವ್ಯಕ್ತಿತ್ವ ವಿಕಸನದ ಅವಶ್ಯಕತೆಯ ಜತೆಗೆ ಬೌದ್ಧಿಕ ಬೆಳವಣಿಗೆಗೆ ಪೂರಕವಾದ ವಾತಾವರಣ ರೂಪಿಸುವುದು. ಶಿಕ್ಷಣದ ಹಕ್ಕಿನ ಜೊತೆಯಲ್ಲಿ ಎಲ್ಲಾ ಮಕ್ಕಳಿಗೂ ವಿಶ್ರಾಂತಿ ಆರೋಗ್ಯ ರಕ್ಷಣೆ, ಸಾಮಾಜಿಕ ಭದ್ರತೆ, ಬಿಡುವು, ಮನೋರಂಜನೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಿಗೆ ಅವಕಾಶಗಳ ಲಭ್ಯತೆ.





**ಭಾಗವಹಿಸುವ ಹಕ್ಕು:**

ಅಭಿಪ್ರಾಯಗಳಿಗೆ ಮನ್ನಣೆ, ಸ್ವಾತಂತ್ರ್ಯ, ಮಾಹಿತಿ ಲಭ್ಯತೆ, ಬುದ್ಧಿ ಬೆಳವಣಿಗೆಗೆ ಅವಕಾಶ, ಸಂಘಟಿತರಾಗುವುದು ಮತ್ತು ಧಾರ್ಮಿಕ ಹಕ್ಕುಗಳು, ತಮ್ಮ ಕುರಿತು ಆಗುವ ಚರ್ಚೆ, ಚಿಂತನೆಗಳಲ್ಲಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ಮಕ್ಕಳಿಗೆ ಸಿಗಲೇಬೇಕು.

## ಮಕ್ಕಳ ರಕ್ಷಣೆಗಾಗಿ ಇರುವ ಮಕ್ಕಳ ರಕ್ಷಣಾ ವ್ಯವಸ್ಥೆಗಳು ಮತ್ತು ಪ್ರಾಧಿಕಾರ




### ತಾಲೂಕು-ಜಿಲ್ಲಾ ಮಟ್ಟ

- ಮಕ್ಕಳ ಸಹಾಯವಾಣಿ 1098
- ಉಪನಿರ್ದೇಶಕರು/ ಕ್ಷೇತ್ರ ಶಿಕ್ಷಣಾಧಿಕಾರಿ ಸಾರ್ವಜನಿಕ ಶಿಕ್ಷಣ ಇಲಾಖೆ
- ಮಕ್ಕಳ ಕಲ್ಯಾಣ ಸಮಿತಿ
- ಸಮಾಜ ಕಲ್ಯಾಣ ಇಲಾಖೆ
- ಬಾಲ ನ್ಯಾಯ ಮಂಡಳಿ
- ಸರ್ವ ಶಿಕ್ಷಣ ಅಭಿಯಾನ
- ಮಕ್ಕಳ ಸ್ನೇಹಿ ಪೋಲಿಸ್ ಅಧಿಕಾರಿ
- ಕಾರ್ಮಿಕ ಇಲಾಖೆ
- ಮಕ್ಕಳ ವಿಶೇಷ ಪೋಲಿಸ್ ಘಟಕ
- ಸಮಾಜ ಕಲ್ಯಾಣ ಇಲಾಖೆ
- ಜಿಲ್ಲಾ ಮಕ್ಕಳ ರಕ್ಷಣಾ ಘಟಕ
- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
- ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು
- ಮಕ್ಕಳ ಬಗ್ಗೆ ಕೆಲಸ ಮಾಡುವ ಸರಕಾರೇತರ ಸಂಸ್ಥೆ

### ರಾಜ್ಯ-ರಾಷ್ಟ್ರ ಮಟ್ಟ

- ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಅಯೋಗ
- ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ

**ಮಕ್ಕಳ ಹಕ್ಕಿಗೆ ಮುಂದಾಗಿ: ದೇಶ ನಡೆಸಲು ಒಂದಾಗಿ**



## ಮಕ್ಕಳ ಸಂಬಂಧಿತ ಕಾನೂನು ಮತ್ತು ಕಾಯಿದೆಗಳು



- ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನ ಕಾಯಿದೆ-2009
- ಬಾಲ ಕಾರ್ಮಿಕ(ನಿಷೇಧ & ನಿಯಂತ್ರಣ) ಅಧಿನಿಯಮ-1986
- ಬಾಲ ಕಾರ್ಮಿಕ (ನಿಷೇಧ & ನಿಯಂತ್ರಣ) ತಿದ್ದುಪಡಿ ಕಾಯಿದೆ -2016
- ಮಕ್ಕಳ ರಕ್ಷಣಾ ನೀತಿ-2016
- ಬಾಲ ನ್ಯಾಯ (ಮಕ್ಕಳ ಪಾಲನೆ ಮತ್ತು ಪೋಷಣೆ) ಕಾಯಿದೆ-2015
- ಬಾಲ್ಯ ವಿವಾಹ ನಿಷೇಧ ಅಧಿನಿಯಮ-2006.
- ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣಾ ಕಾಯಿದೆ( ಫೋಕ್ಸೋ)-2012
- ದ ಕಮಿಷನ್ಸ್ ಆಫ್ ಪ್ರೊಟೆಕ್ಷನ್ ಆಫ್ ಚೈಲ್ಡ್ ರೈಟ್ಸ್ ಆ್ಯಕ್ಟ್-2005
- ಇಮ್‌ಮೊರಲ್ ಟ್ರಾಫಿಕ್ ಪ್ರಿವೆನ್‌ಶನ್ ಆ್ಯಕ್ಟ್-1986

## ಮಕ್ಕಳ ಸಂಪೂರ್ಣ ರಕ್ಷಣೆಗಾಗಿ ಸಹಾಯ ವಿಭಾಗ



'ಪಡಿ' ಸಂಸ್ಥೆಯು ತನ್ನ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು ನಡೆದಿದ್ದಲ್ಲಿ ಅಥವಾ ತಮ್ಮ ಗಮನಕ್ಕೆ ಬಂದಲ್ಲಿ ತಾವೂ ಈ ಪ್ರಕರಣಗಳನ್ನು ಪಡಿ ವೆಬ್ ಸೈಟ್‌ನಲ್ಲಿ(www.padivalored.com) ದೂರು ದಾಖಲಿಸಲು ಅವಕಾಶ ಕಲ್ಪಿಸಲು ಹೊಸ ಪೋರ್ಟಲ್‌ನ್ನು ರೂಪಿಸಿದ್ದು ಇದರಲ್ಲಿ ಸಾರ್ವಜನಿಕರು ತಮ್ಮ ದೂರನ್ನು ದಾಖಲಿಸಬಹುದು ಬಂದಂತಹ ದೂರುಗಳನ್ನು ಸೂಕ್ತ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ಸೂಕ್ತ ಅನುಸರಣೆ ಮಾಡಲಾಗುವುದು.

ಈ ಕೆಳಗಿನ ಪ್ರಮುಖ ವಿಚಾರಗಳ ಕುರಿತಂತೆ ತಾವೂ ದೂರನ್ನು ದಾಖಲಿಸಬಹುದು.

1. ಮಕ್ಕಳ ಹಕ್ಕುಗಳ ಬಗ್ಗೆ ಮತ್ತು ಮಕ್ಕಳ ರಕ್ಷಣೆಗೆ ಸಂಬಂಧಿಸಿದಂತೆ ಯಾವುದೇ ಸಂದೇಹಗಳಿದ್ದರೆ
2. ಶಿಕ್ಷಣ ಹಕ್ಕು ಕಾಯಿದೆಯ ಅನುಷ್ಠಾನದ ಕುರಿತಂತೆ
3. ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಮನೋದೈಹಿಕ ದಂಡನೆಯ ಕುರಿತಂತೆ
4. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ/ಫೋಕ್ಸೋ ಪ್ರಕರಣಗಳು
5. ಶಾಲೆಯಿಂದ ಹೊರಗುಳಿದ ಮಕ್ಕಳ ಬಗ್ಗೆ ಮತ್ತು ಶಾಲೆಗಳಲ್ಲಿ ಉದ್ಭವಿಸುವ ಮಕ್ಕಳ ಕುರಿತ ಸಮಸ್ಯೆಗಳು.
6. ಮಕ್ಕಳ ನಾಪತ್ತೆ ಮತ್ತು ಮಕ್ಕಳ ಸಾಗಾಟ ಮತ್ತು ಮಾರಾಟ ಪ್ರಕರಣಗಳು
7. ಮಕ್ಕಳ ಪಾಲನೆ ಮತ್ತು ಪೋಷಣೆಗೆ ಸಂಬಂಧಪಟ್ಟಂತೆ
8. ಮಕ್ಕಳ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳು




ಪ್ರಕಟಣೆ: 'ಪಡಿ' ಗುಣಮಟ್ಟದ ಶಿಕ್ಷಣಕ್ಕಾಗಿ ಮಕ್ಕಳ ಸ್ನೇಹಿ ಸಮಾಜ ನಿರ್ಮಾಣ
'ಗಣೇಶ್', ಕೊಲಾಸೋ ಆಸ್ಪತ್ರೆಯ ಬಳಿ, 2ನೇ ಅಡ್ಡರಸ್ತೆ, ಬೆಂದೂರ್‌ವೆಲ್, ಮಂಗಳೂರು-2. ದೂರವಾಣಿ: 0824-2439895 Website: www.padivalored.com

ಚೈಲ್ಡ್ ಲೈನ್ 1098